2) 50 ಸಂಖ್ಯೆಗೂ ಹೆಚ್ಚಿರುವ ವಿದ್ಯಾರ್ಥಿ ನಿಲಯದ ಪ್ರತಿ ಭೋಧಕರಿಗೆ ರೂ. 175ರಂತೆ ಮಾಹೆಯಾನ.

ಅನಾವರ್ತ ವೆಚ್ಚ :

1)	ಕ್ರೀಡಾ ಸಾಮಗ್ರಿ	-	ಪ್ರತಿ ವಿದ್ಯಾರ್ಥಿನಿಲಯದ ಪ್ರಾರಂಭಿಸುವಾಗಿ ರೂ. 1000.
2)	ಪಾತ್ರೆ ಹಾಗೂ ಪೀಠೋಪಕರಣ	-	ಪ್ರತಿ ವಿದ್ಯಾರ್ಥಿನಿಲಯ ಪ್ರಾರಂಭಿಸುವಾಗ ರೂ. 40.000
3)	ಗ್ರಂಥಾಲಯದ ಪುಸ್ತಕ	-	ಪ್ರತಿ ವಿದ್ಯಾರ್ಥಿನಿಲಯ ಪ್ರಾರಂಭಿಸುವಾಗ ರೂ. 1500.00

ಬಿ.ಸಿ.ಎಂ. ಇಲಾಖೆ : ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಮೆಟ್ರಿಕ್ಪೂರ್ವ ವಿದ್ಯಾರ್ಥಿನಿಲಯಗಳಿಗೆ ಅನುದಾನ ನೀಡಿರುವುದಿಲ್ಲ, ಆದರೆ, ಪ್ರತಿ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 250ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 300ರಂತೆ ಭೋಜನಾ ವೆಚ್ಚವನ್ನು ಭರಿಸಲಾಗುತ್ತಿದೆ. ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಮಾಹೆಯಾನ 250ರಂತೆ ಪ್ರತಿ ವಿದ್ಯಾರ್ಥಿಗೆ ಪ್ರತಿ ಮಾಹೆಗೆ ಭೋಜನಾ ವೆಚ್ಚಕ್ಕಾಗಿ ಅನುದಾನವನ್ನು ನೀಡಲಾಗುತ್ತಿದೆ.

ಈ) ಸಮಾಜ ಕಲ್ಯಾಣ ಇಲಾಖೆ ಬಿ.ಸಿ.ಎಂ. ಇಲಾಖೆ

ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ದೊರೆಯತ್ತಿರುವ ಸೌಲಭ್ಯಗಳಿಗೂ ಮತ್ತು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ನೀಡುತ್ತಿರುವ ಸೌಲಭ್ಯಗಳಲ್ಲಿ ವ್ಯತ್ಯಾಸವಿರುತ್ತದೆ. ತಾರತಮ್ಯವಿರುವ ಅಂದರೆ, ಇತರೆ ವೆಚ್ಚ ಸಮವಸ್ತ್ರ, ಪಠ್ಯಪುಸ್ತಕ ಮತ್ತು ಲೇಖನಸಾಮಗ್ರಿ ವೆಚ್ಚಗಳಲ್ಲಿ ವ್ಯತ್ಯಾಸವಿದ್ದು ಸದರಿ ತಾರತಮ್ಯವನ್ನು ನಿವಾರಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

1995-96ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ವರ್ಗಾವಣೆಗಳ ಬಗ್ಗೆ

1004 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ನಡೆದಿರುವ ವರ್ಗಾವಣೆಗಳೆಷ್ಟು? ವರ್ಗವಾರು ವಿವರ ಒದಗಿಸುವುದು?

ಆ) ವರ್ಗಾವಣೆಯಿಂದ ಸರ್ಕಾರದ ಬೊಕ್ಕಸಕ್ಕೆ ಖರ್ಚಾದ ಹಣವೆಷ್ಟು?

ಇ) ಕೋರಿಕೆಯ ಮೇಲೆ ಆದ ವರ್ಗಾವಣೆ ಎಷ್ಟು? ಹಾಗೂ ಸರ್ಕಾರ ಮಾಡಿರುವ ವರ್ಗಾವಣೆ ಎಷ್ಟು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ 1995-96ನೇ ಸಾಲಿನಲ್ಲಿ ನಡೆದಿರುವ ವರ್ಗಾವಣೆಗಳ ವರ್ಗವಾರು ವಿವರ ಈ ಕೆಳಕಂಡಂತಿದೆ.

ಎ. ವರ್ಗ	ಬಿ.ವರ್ಗ	ಸಿ.ವರ್ಗ	ಡಿ.ವರ್ಗ	ಒಟ್ಟು
16	14	410	157	597

ಆ) ರೂ. 22,500 ರೂ. 10,500 ರೂ. 204600 ರೂ 45300 ರೂ. 282900

ಇ)

ಕೋರಿಕೆ					ಸರ್ಕಾರ ಮಾಡಿರುವ ವರ್ಗಾವಣೆ				
ಎ	ಬಿ	ಸಿ	ಡಿ	ಒಟ್ಟು	ಎ	ಬಿ	ಸಿ	ಡಿ	ಒಟ್ಟು
7	8	69	6	90	9	6	341	151	507

ಗೃಹ ಮಂಡಲಿಯ ವರ್ಗಾವಣೆಗಳು

1005 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995-96ನೇ ಸಾಲಿನಲ್ಲಿ ಗೃಹನಿರ್ಮಾಣ ಮಂಡಳಿಯಲ್ಲಿ ನಡೆದ ಒಟ್ಟು ವರ್ಗಾವಣೆಗಳು ಎಷ್ಟು?*

ಆ) *ಕೋರಿಕೆಯ ಮೇಲೆ ಆದ ವರ್ಗಾವಣೆಗಳು ಎಷ್ಟು? ಸರ್ಕಾರ ಮಾಡಿರುವ ವರ್ಗಾವಣೆ ಎಷ್ಟು?*

ಇ) *ಇದರಿಂದ ಸರ್ಕಾರದ ಬೊಕ್ಕಸಕ್ಕೆ ವಿರ್ಚಾದ ಹಣವೆಷ್ಟು?*

ಶ್ರೀ ಬಸವರಾಜ್ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) 179

ಆ) ಕೋರಿಕೆಯ ಮೇಲೆ 24 ನೌಕರರ ವರ್ಗಾವಣೆ ಆಗಿದೆ. ಇದು ಸರ್ಕಾರದಿಂದ ಅನುಮೋದನೆ ಪಡೆದಿದೆ. ಕರ್ನಾಟಕ ಗೃಹ ಮಂಡಳಿ ಸಾಮಾನ್ಯ ವರ್ಗಾವಣೆಯಲ್ಲಿ ತನ್ನ 155 ನೌಕರರನ್ನು ವರ್ಗಾವಣೆ ಮಾಡಿದೆ.

ಇ) ರೂ. 1.91 ಲಕ್ಷಗಳು.

ರಾಜ್ಯದಲ್ಲಿ ಅನಧಿಕೃತ ಗ್ರಾನೈಟ್ ಸಾಗಿಸುತ್ತಿರುವುದು

1305 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಕಳೆದ 6 ತಿಂಗಳುಗಳಿಂದ ಅಕ್ರಮವಾಗಿ ಗ್ರಾನೈಟ್ ಕಲ್ಲುಗಳನ್ನು ಸಾಗಿಸುತ್ತಿರುವುದರಿಂದ ವಶಪಡಿಸಿಕೊಂಡಿರುವುದು ನಿಜವೇ?*

ಆ) *ಹಾಗಿದ್ದಲ್ಲಿ ಯಾವ ಯಾವ ಗಣಿ ಮಾಲೀಕರಿಂದ ಎಷ್ಟೆಷ್ಟು ಗ್ರಾನೈಟ್ ಕಲ್ಲುಗಳನ್ನು ವಶಪಡಿಸಿಕೊಳ್ಳಲಾಗಿದೆ. ಅವುಗಳ ಮೌಲ್ಯವೆಷ್ಟು?*

(ಸಂಪೂರ್ಣ ವಿವರ ನೀಡುವುದು)

ಶ್ರೀ ಎಸ್.ಡಿ. ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ನಿಜ

ಆ) ಕಳೆದ 6 ತಿಂಗಳಿಂದ ರಾಜ್ಯದಲ್ಲಿ ಅನಧಿಕೃತವಾಗಿ ಕೆಲಸ ಮಾಡುತ್ತಿದ್ದ ಕೆಲವು ಪ್ರದೇಶಗಳಲ್ಲಿ ಹಾಗೂ ಸಾಗಿಸುತ್ತಿರುವಾಗ ಗ್ರಾನೈಟ್ ದಿಮ್ಮಿಗಳನ್ನು ವಶಪಡಿಸಿಕೊಳ್ಳಲಾಗಿದೆ. ವಶಪಡಿಸಿಕೊಂಡ ಸಮಯದಲ್ಲಿ ಯಾವ ವ್ಯಕ್ತಿಗಳು ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದ್ದರೆಂಬುದಕ್ಕೆ ನಿಖರವಾದ ಮಾಹಿತಿ ಪಡೆಯಲು ಸಾಧ್ಯವಾಗಲಿಲ್ಲ. ಈಗ ವಶಪಡಿಸಿಕೊಂಡಿರುವ ಒಟ್ಟು 1007 ಕಲ್ಲು ದಿಮ್ಮಿಗಳ ಅಂದಾಜು ಮೌಲ್ಯ ಎರಡು ಕೋಟಿ ರೂಪಾಯಿಗಳಾಗುತ್ತದೆ.